ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಈ ಪ್ರಶ್ನೆಯ (ಅ) ಗೆ ಉತ್ತರವಾಗಿ ಬಂದಿದೆ ಎಂದು ಹೇಳಿದ್ದೀರಿ. ಆದರೆ ಇದೇ ಪ್ರಶ್ನೆಯ (ಗು) ಗೆ ಉತ್ತರವಾಗಿ ಇಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಕಾರಣ ಏನು ಸ್ವಾಮಿ ?

† ಶ್ರೀ ಎಸ್. ಎಂ. ಕೃಷ್ಣ.—ಅಲ್ಲಿ ಚಿನ್ನ ಇದೆ ಆದರೆ ಅದು ಕಮರ್ಷಿಯಲ್ ಎಕ್ಸ್‌ಪ್ಲಾಯಿಟೇಷನ್‌ಗೆ ಅನುಕೂಲಕರವಾಗಿದೆಯೇ ಇಲ್ಲವೇ ಎನ್ನುವ ಪ್ರಶ್ನೆ ಮಾಡಿದಾಗ it is not Commercially exploitable ಎನ್ನುವ ತೀರ್ಮಾನ ತೆಗೆದುಕೊಂಡಿದ್ದಾರೆ. ಆದರೆ ಕೇಂದ್ರ ಸರ್ಕಾರದವರು ಇತ್ತೀಚೆಗೆ ಎಲ್ಲೆಲ್ಲಿ ಇಂತಿಂತಹ ಚಿನ್ನದ ನೀಕ್ಷೇಪಗಳು ಇವೆಯೋ ಅವುಗಳ ಬಗ್ಗೆ ಒಂದು ಸರ್ವೆ ಮಾಡುತ್ತಿದ್ದಾರೆ. ಆ ಸರ್ವೆ ಪ್ರಕಾರ 5 ನೇ ಪಾಂಚವಾರ್ಷಿಕ ಯೋಜನೆಯ ಕೊನೇ ಭಾಗದಲ್ಲಿ ಈ ಕುರಿತು ಕೊಂಡಕ್ಕೂ ಸಹ ಗಮನ ಕೊಡುತ್ತಾರೆಂದು ಭಾವಿಸಿರುತ್ತಾಗಿದೆ.

ಶ್ರೀ ಎಸ್ ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ನೋಡಿದರೆ 1940-41ರ ನಂತರ ಈ ಜಾಗವನ್ನು ಅಜಮಾಯಿಷಿ ಮಾಡಿಲ್ಲ ಎಂದು ಕಾಣುತ್ತದೆ. ಇದಕ್ಕೆ ಕಾರಣ ಏನು ಎನ್ನುವುದನ್ನು ತಿಳಿಸುತ್ತೀರಾ ? ಆದರಲ್ಲೂ ಬ್ರಿಟಿಷ್ ಕನ್‌ಸರನ್ ಇದ್ದಾಗ ಈ ಸ್ಥಳವನ್ನು ಅಜಮಾಯಿಷಿ ಮಾಡಿದರು ಎಂದಹಾಗೆ ಕಾಣುತ್ತದೆ. ನಂತರ ಇದನ್ನು ಅಜಮಾಯಿಷಿ ಮಾಡಿಲ್ಲ, ಈ ಬಗ್ಗೆ ನಾನು ಹೇಳುವುದು ಮುಳಿಗಾಲದಲ್ಲಿ ಆ ಜಾಗದಲ್ಲಿ ಚಿನ್ನದ ಚೂರುಗಳ ತಿಳಿ ತಿಳಿ ಬಂದು ಕಾಡಿನಲ್ಲಿ ತಿರುಗಾಡುವ ಜನಗಳ ಕೈಗೆ ಸಿಕ್ಕಿಹೋಗುತ್ತದೆ ಆದುದರಿಂದ ಈ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಎಸ್. ಎಂ. ಕೃಷ್ಣ.—ನಮ್ಮ ಗಮನಕ್ಕೆ ಬಂದಿರುವುದು ಇದು, 1880ನೇ ಇಸವಿಯಲ್ಲೂ ಕೂಡ ಅಲ್ಲಿ ಚಿನ್ನದ ಗಣಿ ಕೆಲಸಮಾಡುತ್ತಿದ್ದರು ಎನ್ನುವುದು ಜಿಯೊಜಿಕರ್ ಸರ್ವೆನಲ್ಲಿದೆ. A serious effort was made by the John Tailor and Company, to exploit gold in this area, but they were not successful. The Department of Geology and Mines are convinced that the kind of deposits that we found were not economically viable to invest more funds in order to get gold from it.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಅಲ್ಲಿ ಮೆಷನರಿ ಕೊರತೆ ಇದೆ. ಆಕಾರಣ ಕ್ಕಾಗಿ ಅದನ್ನು ತನಿಖೆಮಾಡಿಲ್ಲ ಎಂದು ತಾವು ಸ್ಟೇಟ್‌ಮೆಂಟ್‌ನಲ್ಲಿ ಕೊಟ್ಟಿದ್ದೀರಿ. ಆದುದರಿಂದ ಸರಿಯಾದ ಮೆಷಿನರಿ ತೆಗೆದುಕೊಂಡು ಅಲ್ಲಿ ಏನಾದರೂ ಕೆಲಸ ಮಾಡುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ನಾನು ಆ ಬಗ್ಗೆ ಈಗಾಗಲೇ 5ನೇ ಪಾರಜವಾರ್ಷಿಕ ಯೋಜನೆಯ ಕೊನೇ ಭಾಗದಲ್ಲಿ ಆ ಪ್ರದೇಶದಲ್ಲಿ ಚಿನ್ನ ತೆಗೆಯತಕ್ಕಂಥ ಪ್ರಯತ್ನ ಕೇಂದ್ರ ಸರ್ಕಾರದವರು ಮಾಡಲಕ್ಕೆ ಸಾಧ್ಯ ಇದೆ ಎಂದು ಹೇಳಿದ್ದೇನೆ.

* *Re-organisation of Commerce and Industries Department*

262. Sri K. R. SRINIVASULU NAYUDU (Shanthinagar) .—

Will the Minister for Industries and Parliamentary Affairs be pleased to state :—

(*a*) whether there is a proposal to re-organise the Department of Industries and Commerce ;

(*b*) if so, the nature of proposed re-organisation ;

(*c*) the date on which the re-organisation of the Daptrtment will be completed ;

(*d*) the financial implications as a result of this re-organisation ?

Sri S. M. KRISHNA (Minister for Industries and Parliamentary Affairs) .—

(*a*) A Proposal for the re-organisation and strengthening of the Industries and Commerce Department has been received from the Direcor of Industries and Commerce.

(*b*) The proposal is to strengthen the field apparatus and the headquarters of the Department to provide for Regional Offices of the Department to regroup responsibilities to enable the Director of I and C to function more effectively.

(*c*) Government are examining the proposal sent by the Director of I and C. No date can be fixed for taking decision on this re-organisation proposal.

(*d*) The proposal of the Director of Industries and Commerce involves an additional expenditure of Rupees 4 lakhs approximately per annum.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.—ಸ್ವಾಮಿ (ಈ) ಪ್ರಶ್ನೆಯ (ಅ)ಗೆ ಉತ್ತರವಾಗಿ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯನ್ನು ಪುನರ್ವ್ಯವಸ್ಥೆಗೊಳಿಸಿ ಬಲಪಡಿಸುವಬಗ್ಗೆ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯ ನಂಚಾಲಕರಿಂದ ಸಲಹೆಯೊಂದು ಬಂದಿದೆ ಎಂದು ಹೇಳಿದ್ದಿರೀ. ಆ ಸಲಹೆಯ ರೂಪರೇಖೆಗಳ ವಿವರ ಹೇಳುತ್ತೀರಾ ?

ಶ್ರೀ ಎಸ್. ಎಂ.ಕೃಷ್ಣ.—ಅದರ ಮೂಲ ಉದ್ದೇಶ ಈ ರೀತಿ ಇದೆ. ಕೈಗಾರಿಕಾ ಅಭಿವೃದ್ಧಿ ಈ ದೃಷ್ಟಿಯಿಂದ ಇಲಾಖೆಯನ್ನು ಪುನರ್ವವಸ್ಥೆಗೊಳಿಸಿ ಇಲಾಖೆ ಅಧಿಕಾರಿಗಳು ಫೀಲ್ಡ್ ವರ್ಕ್‌ಗೆ ಗಮನ ಕೊಡಬೇಕು ಮತ್ತು ಅಧಿಕಾರ ವಿಕೇಂದ್ರೀಕರಣ ಮಾಡಿ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಮಹತ್ವ ಗಮನ ಕೊಡಬೇಕು ಎಂದು. ಈ ಬಗ್ಗೆ ಕೆಲವು ಶಿಫಾರಸ್ಸುಗಳನ್ನು ಡೈರಕ್ಟರ್ ಆಫ್ ಇಂಡಸ್ಟ್ರೀಸ್ ನವರು ಮಾಡಿದ್ದಾರೆ. ಅದು ಮಾರ್ಚ್ ತಿಂಗಳಿನಲ್ಲಿ ಸರ್ಕಾರಕ್ಕೆ ಬಂದಿದೆ. ಆ ಬಗ್ಗೆ ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡುತ್ತಿದ್ದಾರೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯಿಡು.—ಸ್ವಾಮಿ, ತಮ್ಮ ಗಮನಕ್ಕೆ ಗೊತ್ತಿದ್ದ ಹಾಗೆ ಈ ಇಲಾಖೆಯಲ್ಲಿ ಚೆಕ್ಕೋ ಎಕನಾಮಿಕ್ ಸರ್ವೆ ಆದಾಗ. ಕೇಂದ್ರ ಸರ್ಕಾರದ ನೆರವಿನೊಡನೆ ಸರ್ವೆ ಆದಾಗ ಕೆಲವು ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಗಮನಕೊಡಬೇಕು ಎಂದು ಮಾಡಿದ್ದಾರೆ. ಆರೀತಿಯಾಗಿ ಈ ಜಿಲ್ಲೆಗಳನ್ನು ಪುನರ್ವಿಂಗಡಿಸುತ್ತೀರಾ ಮತ್ತು ಈ ಇಲಾಖೆಯನ್ನು ಪುನರ್ವ್ಯವಸ್ಥೆ ಮಾಡುವಾಗ ಹಿಂದುಳಿದ ಜಿಲ್ಲೆಗಳಿಗೆ ತಕ್ಕ ಕಾರ್ಯಕ್ರಮ ಕೈಗೊಳ್ಳುವುದಕ್ಕೆ ಏನು ಯೋಜನೆ ಇದೆ ಎನ್ನುವುದನ್ನು ಹೇಳುತ್ತೀರಾ ?

ಶ್ರೀ ಎಸ್. ಎಂ. ಕೃಷ್ಣ.—ರೀಸ್ಟ್ರಕ್ಚರ್ ಮಾಡುವ ಉದ್ದೇಶ ಹಿಂದುಳಿದ ಜಿಲ್ಲೆಗಳಿಗೆ ಹೆಚ್ಚು ಗಮನಕೊಡಬೇಕು ಅನ್ನುವ ಒಂದು ಉದ್ದೇಶವೂ ಇದೆ. ನಮ್ಮಲ್ಲಿರ ತಕ್ಕಂಥ ಹಲವಾರು ಯೋಜನೆಗಳ ಜೊತೆಗೆ ಹಿಂದುಳಿದ ಜಿಲ್ಲೆಗಳಿಗೂ ಹೆಚ್ಚು ಗಮನ ಕೊಡಬೇಕಾಗುವ ವ್ಯವಸ್ಥೆ ಇದೆ.

ಶ್ರೀ ಕೆ. ಆರ್ ಶ್ರೀನಿವಾಸಲು ನಾಯಿಡು.—ಸ್ವಾಮಿ, ಈ ಪ್ರಶ್ನೆಯ (ಇ)ಗೆ ಉತ್ತರವಾಗಿ ಕೈಗಾರಿಕಾ ಹಾಗೂ ವಾಣಿಜ್ಯ ಇಲಾಖೆಯ ನಂಚಾಲಕರು ಕಳುಹಿಸಿದ ಸಲಹೆಯು ಸರ್ಕಾರದವರು ಪರಿಶೀಲನುತ್ತಿದ್ದಾರೆ ಈ ಪುನರ್ವ್ಯವಸ್ಥೆಯ ಸಲಹೆಯ ಬಗ್ಗೆ ನಿರ್ಧಾರವನ್ನು ಕೈಕೊಳ್ಳಲು ಯಾವುದೇ ದಿನಾಂಕವನ್ನು ನಿಗದಿಗೊಳಿಸಲು ಸಾಧ್ಯವಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ಇನ್ನು ಎಷ್ಟು ದಿವಸದಲ್ಲಿ ಈ ಸಲಹೆಯನ್ನು ಪರಿಶೀಲಿಸಿ ಕಾರ್ಯರೂಪಕ್ಕೆ ತರುತ್ತೀರಾ ಸ್ವಾಮಿ ?

ಶ್ರೀ ಎಸ್. ಎಂ. ಕೃಷ್ಣ.—ಈ ಸಲಹೆ ಮಾರ್ಚ್ ತಿಂಗಳಿನಲ್ಲಿ ಬಂತು. ಇನ್ನೂ ಕೂಡ ಒಂದು ಸಂವತ್ಸರೂ ಕೂಡ ಕಳೆದಿಲ್ಲ. ಆದುದರಿಂದ ಇನ್ನು ಹೆಚ್ಚು ಹೇಳುವುದಕ್ಕಾಗುವುದಿಲ್ಲ.